ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1327 |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್,<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19-03-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕೊಪ್ಪಳದಿಂದ ಹೊಸಪೇಟೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಎಷ್ಟು ಕಿ.ಮೀ ಇದೆ; ಈ ಹೆದ್ದಾರಿಯನ್ನು ನಿರ್ಮಾಣ ಮಾಡಿ ನಿರ್ವಹಣೆ ಮಾಡುತ್ತಿರುವ ಸಂಸ್ಥೆ ಯಾವುದು; ಇದು ಮಾಡಿಕೊಂಡಿರುವ ಒಡಂಬಡಿಕೆ ಅನ್ವಯ ಇವರ ಅವಧಿ ಯಾವಾಗ ಮುಗಿದಿದೆ; (ವಿವರವಾದ ಮಾಹಿತಿ ನೀಡುವುದು). | ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ ಬೆಂಗಳೂರು ರವರು ಈ ಕೆಳಗಿನಂತೆ ವರದಿಸಿರುತ್ತಾರೆ.<br>ಕೊಪ್ಪಳದಿಂದ ಹೊಸಪೇಟೆ ಸಂಪರ್ಕಿಸುವ ರಸ್ತೆಯ ಉದ್ದ ಒಟ್ಟು 30.00 ಕಿ.ಮೀ ಇರುತ್ತದೆ.<br>ಕೊಪ್ಪಳದಿಂದ ಹೊಸಪೇಟೆ ರಸ್ತೆಯಲ್ಲಿ ಎರಡು ರಾಷ್ಟ್ರೀಯ ಹೆದ್ದಾರಿ ಯೋಜನೆಗಳಾಗಿ ವಿಂಗಡಿಸಲಾಗಿದೆ.<br>1. ರಾಷ್ಟ್ರೀಯ ಹೆದ್ದಾರಿ-50ರ ಹುನುಗುಂದದಿಂದ ಹೊಸಪೇಟೆ ಕಿ.ಮೀ 261.00 ರಿಂದ 272.57 ಕಿ.ಮೀ ವರೆಗೆ ಒಟ್ಟು 11.67 ಉದ್ದದ ರಸ್ತೆಯ ಇರುತ್ತದೆ.<br>2. ರಾಷ್ಟ್ರೀಯ ಹೆದ್ದಾರಿ-67ರ ಹುಬ್ಬಳಯಿಂದ ಹೊಸಪೇಟೆ ಕಿ.ಮೀ 284.660 ರಿಂದ 296.200 ವರೆಗೆ ಒಟ್ಟು 11.54 ಕಿ.ಮೀ ಇರುತ್ತದೆ.<br>ಎರಡು ರಾಷ್ಟ್ರೀಯ ಹೆದ್ದಾರಿಗಳು ಕೊಪ್ಪಳದಿಂದ ಹೊಸಪೇಟೆಗೆ ಸಂಪರ್ಕ ಕಲ್ಪಿಸುತ್ತದೆ. ಸದರಿ ಎರಡು ರಸ್ತೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |
| ಆ) | ಸದರಿ ರಸ್ತೆಯ ನಿರ್ವಹಣೆಯ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಅವಧಿ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರಸ್ತೆಯನ್ನು ಟೋಲ್ ಮುಕ್ತ ರಸ್ತೆಯನ್ನಾಗಿ ಮಾಡದೇ ಸಂಸ್ಥೆಯೇ ಟೋಲ್ ಶುಲ್ಕವನ್ನು ಸಂಗ್ರಹಿಸುತ್ತಿರುವುದು ನ್ಯಾಯ ಸಮ್ಮತವೇ; ಒಂದು ದಿನಕ್ಕೆ ಸರಾಸರಿ ಹಿಟ್ನಾಳ ಟೋಲ್‌ನಲ್ಲಿ ಸಂಗ್ರಹವಾಗುತ್ತಿರುವ ಶುಲ್ಕವೆಷ್ಟು; | • ರಾಷ್ಟ್ರೀಯ ಹೆದ್ದಾರಿ-67ರ ಹುಬ್ಬಳಿಯಿಂದ ಹೊಸಪೇಟೆ ಕಿ.ಮೀ.284.660 ರಿಂದ 296.200 ವರೆಗೆ ರಸ್ತೆ ಯೋಜನೆಯು Public Private Partnership ಅಡಿಯಲ್ಲಿ ಕೈಗೊಂಡಿದ್ದು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬೆಂಗಳೂರು ರವರು ನಿಯೋಜಿಸಿರುವ ಏಜೆನ್ಸಿಯವರಿಂದಲೆ ಟೋಲ್ ಶುಲ್ಕವನ್ನು ಸಂಗ್ರಹಿಸಲಾಗುತ್ತದೆ. ಹಾಗೂ Gazette Notification No.725(E)dated 06.10.2023 ರಂತೆ ಬಳಕೆದಾರರ ಟೋಲ್ ಶುಲ್ಕ ಸಂಗ್ರಹಿಸಲು ಶಾಶ್ವತವಾಗಿ ಮುಂದುವರೆಸಲಾಗುತ್ತದೆ.<br>• ಇದಲ್ಲದೆ ರಾಷ್ಟ್ರೀಯ ಹೆದ್ದಾರಿ-50ರ ಹುನಗುಂದದಿಂದ ಹೊಸಪೇಟೆವರೆಗಿನ ರಸ್ತೆಗೆ ಸಂಬಂಧಿಸಿದಂತೆ ರಿಯಾಯಿತಿ ಅವಧಿಯವರೆಗೆ ರಿಯಾಯತಿದಾರರಾದ M/s. GMR - Oriental Structural Engineers Pvt. Ltd. ರವರು ಟೋಲ್ ಶುಲ್ಕವನ್ನು ಸಂಗ್ರಹಿಸುತ್ತಿರುತ್ತಾರೆ. ರಾಷ್ಟ್ರೀಯ ಹೆದ್ದಾರಿ 2008ರ |

| | | |
|---|---|---|
| | | ನಿಯಮಗಳಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬೆಂಗಳೂರುರವರು ಶುಲ್ಕವನ್ನು ಸಂಗ್ರಹಿಸುವುದನ್ನು ಮುಂದುವರೆಸುತ್ತದೆ.<br>• ಹಿಟ್ನಾಳ್ ಟೋಲ್ ಪ್ಲಾಜಾದಲ್ಲಿ ಒಂದು ದಿನಕ್ಕೆ ಸರಾಸರಿ ಟೋಲ್ ಶುಲ್ಕ ರೂ.26,53,156.00 ವರೆಗೆ ಸಂಗ್ರಹಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬೆಂಗಳೂರುರವರು ವರದಿಸಿರುತ್ತಾರೆ. |
| ಇ) | ಹಿಟ್ನಾಳ ಟೋಲ್‌ನಲ್ಲಿ ಮರಳು ಟ್ರಾಕ್ಟರ್‌ಗಳಿಗೆ ಪ್ರತ್ಯೇಕವಾಗಿ ಶುಲ್ಕ ಕಟ್ಟದೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ. ಕೈಗೊಂಡ ಕ್ರಮಗಳೇನು; | ರಾಷ್ಟ್ರೀಯ ಹೆದ್ದಾರಿ 2008ರ ನಿಯಮ 3ರ ಉಪನಿಯಮ 4ರ ಪ್ರಕಾರ ಶಾಶ್ವತ ಸೇತುವೆ ಸುರಂಗ ಹಾಗೂ ಬೈಪಾಸ್ ಮುಖಾಂತರ ಸಂಚರಿಸುವ ದ್ವಿಚಕ್ರ ವಾಹನಗಳು, ತ್ರಿಚಕ್ರ ವಾಹನಗಳು, ಟ್ರಾಕ್ಟರ್‌ಗಳು ಮತ್ತು ಎತ್ತಿನಗಾಡಿಗಳಿಗೆ ಯಾವುದೇ ಶುಲ್ಕವನ್ನು ವಿಧಿಸುವುದಿಲ್ಲವೆಂದು ಹಾಗೂ ಮೇಲೆ ತಿಳಿಸಿದಂತೆ ರಾಷ್ಟ್ರೀಯ ಹೆದ್ದಾರಿ ನಿಯಮಗಳ ನಿಬಂಧನೆಯ ಅಡಿಯಲ್ಲಿ ವಿನಾಯಿತಿ ನೀಡಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬೆಂಗಳೂರುರವರು ವರದಿಸಿರುತ್ತಾರೆ. |
| ಈ) | ಟೋಲ್‌ನಲ್ಲಿ ಪ್ರತ್ಯೇಕವಾಗಿ ಮರಳಿನ ಟ್ರಾಕ್ಟರ್‌ಗಳು ಹೋಗುತ್ತಿರುವ ಒಂದು ವರ್ಷದ ವಿಡಿಯೋ ನೀಡಲಾಗುವುದೇ? | ಟೋಲ್‌ನಲ್ಲಿ ಪ್ರತ್ಯೇಕವಾಗಿ ಮರಳಿನ ಟ್ರಾಕ್ಟರ್‌ಗಳು ಹೋಗುತ್ತಿರುವ ವಿಡಿಯೋ ಲಭ್ಯವಿರುವುದಿಲ್ಲವೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬೆಂಗಳೂರುರವರು ವರದಿಸಿರುತ್ತಾರೆ. |

ಸಂಖ್ಯೆ: ಲೋಇ 120 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

అనుబంధం

**ANNEXURE**

| Sl. No. | Project Name | Mode | Total length (In Kms) | Concessionaire/ Contractor | Agreement signed on | Project stage | Concession Period/ Maintenance Period | Toll Plaza |
|---|---|---|---|---|---|---|---|---|
| 1 | Four / Six Laning of Hungund - Hospet Section of NH-50 (Old NH – 13) from Km 202+000 to Km 299+000 on BOT basis | BOT | 97 | GMR - Oriental Structural Engineers Pvt. Ltd. | 08.03.2010 | O&M Stage | 19 Years – Concession Period (i.e., upto 17.09.2029) | (i)Vanageri (ii) Shahpur (iii) Hitnal |
| 2 | Four laning of Hubli-Hospet Section of NH-67 (Old NH-63) from Km.128.850 to Km.272.571 on EPC mode | EPC | 143.72 | Contractor, BSC - KNR (JV) | 29.08.2016 | O&M Stage | 4 years – Maintenance Period (i.e., up to 10.03.2026) | (i) Nalavadi (ii) Halligudi |